ಇ) ಗದಗ ತಾಲ್ಲೂಕು ಅಡವಿ ಸೋಮಾಪುರದಿಂದ ಮುಂಡರಗಿ ತಾಲ್ಲೂಕು ಹಮ್ಮಿಗೆ–ವಿಠಲಾಪುರವರೆಗಿನ ಹೆದ್ದಾರಿ ಸಂಖ್ಯೆ 63ರ ರಸ್ತೆಯನ್ನು ಸುಧಾರಿಸಲು ಸಿ.ಆರ್.ಎಫ್. ಅಡಿಯಲ್ಲಿ ತರಲಾಗುವುದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುಂಗಭದ್ರಾ ಸೇತುವೆ ನಿರ್ಮಾಣದ ಮೊದಲು ಗದಗದಿಂದ ಮುಂಡರಗಿ ಹಡಗಲಿ ಮುಖಾಂತರ ಬೆಂಗಳೂರಿಗೆ ಹೋಗಲು 428 ಕಿಮೀ ಆಗುತ್ತಿದ್ದು, ಸೇತುವೆ ನಿರ್ಮಾಣದ ನಂತರ ಈ ದೂರವು 377 ಕಿಮೀ ಆಗಿರುತ್ತದೆ. ಇದರಿಂದ 51 ಕಿಮೀ ಉಳಿತಾಯವಾಗಿರುತ್ತದೆ.

ಆ) ಸದರಿ ಸೇತುವೆ ಆದ ನಂತರ ವಾಹನಗಳ ಸಂಚಾರವು ಹೆಚ್ಚಿಗೆ ಆಗಿರುವುದು ನಿಜ.

ಇ) ಈ ರಸ್ತೆಯನ್ನು ಕೇಂದ್ರ ರಸ್ತೆ ನಿಧಿಯಡಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

605(467) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಯಾವ ಯಾವ ನದಿಗಳಿಗೆ ಸೇತುವೆ ನಿರ್ಮಾಣ ಮಾಡುವ ಕ್ರಿಯಾ ಯೋಜನೆಯನ್ನು ಸರ್ಕಾರ ಸಿದ್ಧಪಡಿಸಿದೆ;

ಆ) 2004–05ನೇ ಸಾಲಿನಲ್ಲಿ ಯಾವ ಯಾವ ಯೋಜನೆಯಲ್ಲಿ ಎಷ್ಟು ಸೇತುವೆಗಳನ್ನು ನಿರ್ಮಿಸಿಕೊಡುವ ಸರ್ಕಾರದ ಮುಂದಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸೇತುವೆಗಳ ನಿರ್ಮಾಣಕ್ಕೆ ಪ್ರಸ್ತುತ ಯಾವುದೇ ಕ್ರಿಯಾ ಯೋಜನೆಯನ್ನು ರೂಪಿಸಲಾಗಿರುವುದಿಲ್ಲ.

ಆ) ಸಧ್ಯದಲ್ಲಿ ನಬಾರ್ಡ್ ಯೋಜನೆಯಡಿ 2003–04ನೇ ಸಾಲಿನಲ್ಲಿ ಗುರುತಿಸಲಾಗಿದ್ದ ವೇಣೂರು ಪೆರ್ಮುಡ ರಸ್ತೆಯಲ್ಲಿನ ಪೆರ್ಮುಡ ಹತ್ತಿರ ಸೇತುವೆ ನಿರ್ಮಾಣ ಕಾಮಗಾರಿಯ ಅಂದಾಜನ್ನು ರೂ. 70.00 ಲಕ್ಷಗಳಿಗೆ ನಬಾರ್ಡನ ಅನುಮೋದನೆಗೆ ಕಳುಹಿಸಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ. ನಬಾರ್ಡನಿಂದ ಅನುಮೋದನೆ ದೊರೆತನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

606(471) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ಯಾವ ಯಾವ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಗಳು ಬಂದಿವೆ;

ಆ) ಇಲಾಖಾ ವತಿಯಿಂದ 2004–05ನೇ ಸಾಲಿಗೆ ಎಷ್ಟು ಕಿ.ಮೀ. ರಸ್ತೆಗಳನ್ನು ಡಾಂಬರೀಕರಣಗೊಳಿಸಲು ಯೋಜಿಸಲಾಗಿದೆ? (ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಅ) ರಸ್ತೆಗಳ ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ. ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ.

ಆ) ಅನುದಾನದ ಲಭ್ಯತೆಯ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಅನುಬಂಧ–1

(ರಸ್ತೆಗಳ ವಿವರಗಳು)

ವಿಧಾನಸಭೆಯ ಸದಸ್ಯರಾದ ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ರವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 471ಕ್ಕೆ ಪೂರಕ ಟಿಪ್ಪಣಿ:

ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ ವ್ಯಾಪ್ತಿಯಲ್ಲಿ ಬರುವ ಬೆಳ್ತಂಗಡಿ ತಾಲ್ಲೂಕಿನ ಈ ಕೆಳಕಂಡ ರಸ್ತೆಗಳನ್ನು ಕೇಂದ್ರ ನಿಧಿ ಯೋಜನೆಯಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಹಂತದಲ್ಲಿದೆ.

1. ಬೆಳ್ತಂಗಡಿ ತಾಲ್ಲೂಕಿನ ಕಡೂರು ಬಂಟ್ವಾಳ ಈಗ ಪುನರ್ ನಾಮಕರಣಗೊಂಡಂತೆ ಕಡೂರು ಕಾಂಞಗಡ್ ರಸ್ತೆ ಕಿಮೀ 99.27 ರಿಂದ 110.00 ಕಿಮೀ ವರೆಗೆ ಚಾರ್ಮುಡಿ ಘಾಟ್ ಪ್ರದೇಶವನ್ನು ಅಭಿವೃದ್ಧಿಪಡಿಸುವುದು. ಅಂದಾಜು ಮೊತ್ತ ರೂ. 100.00 ಲಕ್ಷ.

2 ಬೆಳ್ತಂಗಡಿ ತಾಲ್ಲೂಕು ವೇಣೂರು–ಅಂಡಿಂಜೆ–ಮಾರಾವಿ ರಸ್ತೆ ಕಿಮೀ 0.00 ರಿಂದ 15.00 ಕಿಮೀ ವರೆಗೆ ಅಭಿವೃದ್ಧಿಪಡಿಸುವುದು ಅಂದಾಜು ಮೊತ್ತ ರೂ. 150.00 ಲಕ್ಷ

3. ಬೆಳ್ತಂಗಡಿ ತಾಲ್ಲೂಕು ಕಿಲ್ಲೂರು ಕಾಜೂರು ರಸ್ತೆ ಕಿಮೀ 0.00 ರಿಂದ 17.60 ವರೆಗೆ ಅಭಿವೃದ್ಧಿಪಡಿಸುವುದು ಅಂದಾಜು ಮೊತ್ತ ರೂ. 140.00 ಲಕ್ಷ.

4. ಬೆಳ್ತಂಗಡಿ ತಾಲ್ಲೂಕು ಅಜೇಕರ್ ಮಿಯಾರು ನಾರಾವಿ ಗುರುವಾಯನಕೆರೆ–ಉಪ್ಪಿನಂಗಡಿ ರಸ್ತೆಯನ್ನು ಅಭಿವೃದ್ಧಿಪಡಿಸುವುದು ಅಂದಾಜು ಮೊತ್ತ ರೂ. 181.00 ಲಕ್ಷ.

607(473) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿಯಾದ ಕಡೂರು–ಬಂಟ್ವಾಳ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ : ಯೋಜನೆ ಸರ್ಕಾರದ ಮುಂದೆ ಇದೆಯೆ;

ಆ) ಹಾಗಿದ್ದಲ್ಲಿ ಈ ಪ್ರಸ್ತಾವಿತ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ತೀರ್ಮಾನ ಹಾಗೂ ಅನುಷ್ಠಾನಕ್ಕೆ ಈವರೆಗೆ ಕೈಗೊಂಡಿರುವ ಕ್ರಮಗಳೇನು;

ಇ) ಸರ್ಕಾರವು ಹಾನಿಗೀಡಾದ ಈ ರಸ್ತೆಗಳ ದುರಸ್ತಿ ಸೇರಿದಂತೆ ಚಾರ್ಮಡಿ ಘಾಟಿಯ ರಸ್ತೆ ಮತ್ತು ಹಿಮ್ಮುರಿ ತಿರುವುಗಳ ದುರಸ್ತಿ ಹಾಗೂ ಪುನರ್ ನಿರ್ಮಾಣ ಕಾರ್ಯಕ್ಕೆ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?